**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕ:-09.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ . ಸಿ.ಆರ್.ಬಿ.ರವರಿಂದ:**

ದಾವಾ ಐಟಂ ನಂ: 1 ರ ಆಸ್ತಿ ಸಂಖ್ಯೆ: 140 ಆಗಿರುತ್ತದೆ. ದಾವಾ ಐಟಂ ನಂ: 1 ರ ಆಸ್ತಿ ಸಂಖ್ಯೆ: 140 ಎಂದು ತೋರಿಸಲು ಖಾನೇಶ್ಮಾರಿ ನಂ: ಉಳ್ಳ ನಿವೇಶನದ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಖಾನೇಶ್ಮಾರಿ ನಂ: 140 ಮೂಲತಃ ನನ್ನ ತಂದೆಯ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಖಾನೇಶ್ಮಾರಿ ನಂ: 140 ನನ್ನ ತಂದೆಗೆ ಸೇರಿದ್ದು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿ.ಪಿ.1 ಖಾತಾ ಎಕ್ಸ್ ಟ್ರ್ಯಾಕ್ಟ್ ಕ್ರಮ ಸಂ: 41, 3 ನೇ ಪ್ರತಿವಾದಿಯ ಹೆಸರಿನಲ್ಲಿ ನಮೂದು ಇರುತ್ತದೆ ಎಂದರೆ ಸಾಕ್ಷಿಯ ಸದರಿ ಆಸ್ತಿಯು ಮೂಲತಃ ನನ್ನ ತಂದೆಗೆ ಸೇರಬೇಕಾಗಿದ್ದು 3 ನೇ ಪ್ರತಿವಾದಿಯು ಅದನ್ನು ವಂಚಿಸಿ ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಕ್ರಮ ಸಂ: 41 ರ ಆಸ್ತಿಯಲ್ಲಿ ನನಗೆ ವಿಭಾಗ ಬರಬೇಕೆಂದು ಈ ದಾವೆಯಲ್ಲಿ ನಾನು ಸದರಿ ಆಸ್ತಿಯನ್ನುಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಮ ಸಂ. 41 ರ ಆಸ್ತಿಯು ಮೂರನೇ ಪ್ರತಿವಾದಿಯ ಹೆಸರಿಗೆ ಸೇರಬೇಕಾಗಿದ್ದು ನನಗೂ ಅದಕ್ಕೂ ಸಂಬಂದವಿಲ್ಲ ಎಂದರೆ ಸರಿಯಲ್ಲ. ನಿ.ಪಿ.4 ರಂತೆ ಖಾನೇಶ್ಮಾರಿ ನಂ: 191/1 ಒಂದನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿಯು ನಿ.ಪಿ.4 ರಲ್ಲಿರುವ ಖಾನೇಶ್ಮಾರಿ ನಂ: 191/1 ನನ್ನ ತಂದೆಗೆ ಸೇರಬೇಕಾಗಿದ್ದುದ್ದು ಎಂದು ನುಡಿಯುತ್ತಾರೆ.

ನಿ.ಪಿ.4, 1ನೇ ಪ್ರತಿವಾದಿಯ ಹೆಸರಿನಲ್ಲಿ ತಪ್ಪಾಗಿ ನಮೂದಾಗಿರುತ್ತದೆ ಎಂದು ಅದನ್ನು ಪ್ರಶ್ನಿಸಿ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇನೆ ಎನ್ನುತ್ತಾರೆ. ನಾನು ಮತ್ತು ನನ್ನ ಅಣ್ಣ ತಮ್ಮಂದಿರು 1970-71 ರಲ್ಲಿಯೇ ನಮ್ಮ ಕುಟುಂಬದ ಆಸ್ತಿಗಳನ್ನು ನೊಂದಾಯಿತ ವಿಭಾಗಪತ್ರದ ಮೂಲಕ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ .ಸಾಕ್ಷಿ ಮುಂದುವರಿದು ದಾವಾ ಐಟಂನಂ: 1 ಮತ್ತು 2 ಅನ್ನು ಬಿಟ್ಟು ಉಳಿದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೆವು ಎಂದು ನುಡಿಯುತ್ತಾರೆ. ದಾವಾ ಐಟಂನಂ:1 ಮತ್ತು 2 ನಮ್ಮ ಒಟ್ಟು ಕುಟುಂಬದ ಆಸ್ತಿಗಳಾಗಿಲ್ಲದೇ ಇರುವುದರಿಂದಲೇ ನಾವು 1970-71 ರಲ್ಲಿ ಆದ ವಿಭಾಗದಲ್ಲಿ ಸೇರಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 1970-71 ರಲ್ಲಿ ನಾವು ಮಾಡಿಕೊಂಡ ವಿಭಾಗಪತ್ರದಲ್ಲಿ ದಾವಾ ಆಸ್ತಿಗಳನ್ನು ಬಿಟ್ಟು ವಿಭಾಗ ಮಾಡಿಕೊಳ್ಳುತ್ತಿದ್ದೇವೆ ಎಂದು ನಮೂದಿಸಿರುವುದಿಲ್ಲ ಆದರೆ ನನ್ನ ತಂದೆ ಬಾಯಿ ಮಾತಿನ ಮೂಲಕ ಇವುಗಳನ್ನು ನೀವೇ ವಿಭಾಗ ಮಾಡಿಕೊಳ್ಳಿ ಎಂದು ತಿಳಿಸಿದ್ದರು ಎನ್ನುತ್ತಾರೆ. ಸುಮಾರು 55 ವರ್ಷಗಳ ಹಿಂದೆಯೇ ನಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದು ಒಂದು ವೇಳೆ ನಮ್ಮ ಕುಟುಂಬದ ಆಸ್ತಿಗಳು ಉಳಿದಿದ್ದರೇ ಇಷ್ಟು ವರ್ಷಗಳ ಕಾಲ ಸುಮ್ಮನೇ ಇರುತ್ತಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿಗಳು ಸ್ವಾಧೀನವನ್ನು ಹೊಂದಿ ಮಾಲೀಕರಾಗಿರುತ್ತಾರೆ ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪ್ರತಿವಾದಿಗಳೇ ನಮಗೆ ಬರಬೇಕಾದ ಆಸ್ತಿಯನ್ನು ಕೊಡದೇ ವಂಚಿಸುತ್ತಿದ್ದಾರೆಎಂದು ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**